- -

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ</u>**<u>: 14-01-2022.</u>**

**ಮುಂದುವರೆದ ಪಾಟೀ ಸವಾಲು - ಶ್ರೀ. ಕೆ.ಎಸ್.ಬಿ., ವಕೀಲರಿಂದ**

ಸರ್ವೆ ನಂ.9-5 ಯಾರ ಹೆಸರಿನಲ್ಲಿದೆ ಎಂದರೆ ನನ್ನ ಮತ್ತು ನನ್ನ ಅಣ್ಣ 1 ನೇ ಪ್ರತಿವಾದಿ ಇಬ್ಬರ ಹೆಸರಿನಲ್ಲೂ ಇದೆ. ಅದರ ವಿಸ್ತೀರ್ಣ 37 ಗುಂಟೆ ಇರುತ್ತದೆ. ಈಗ ತೋರಿಸಿದ ಪಹಣಿಯನ್ನು ನೋಡಿದೆ, ಇದರ ಪ್ರಕಾರ ಹೊಸಹೂಡ್ಯ ಸರ್ವೆ ನಂ.9-5 ರ ಪಹಣಿ ನನ್ನೊಬ್ಬನ ಹೆಸರಿನಲ್ಲಿ ಮಾತ್ರ ನಮೂದಾಗಿದೆ ಎಂದರೆ ಸರಿ. ಸದರಿ ಪಹಣಿಯನ್ನು **- ನಿ.ಡಿ.1** ಎಂದು ಗುರುತಿಸಿತು. ನನ್ನ ಹೆಸರಿಗೆ ಸದರಿ ಸರ್ವೆ ನಂ.9-5 ರ ಖಾತೆ ಹೇಗೆ ಬದಲಾಯಿತು ಎಂದರೆ ಮೊದಲು ಆ ವಜಮೀನು ಸರ್ವೆ ನಂ.9-3 ರಲ್ಲಿ ಇದ್ದು, ಆನಂತರ ಅದನ್ನು ಪೋಡಿ ಮಾಡಿ ಸರ್ವೆ ನಂ.9-5 ಎಂಬ ನಂಬರ್ ಕೊಟ್ಟಿದ್ದಾರೆ. ಸರ್ವೆ ನಂ.9-3 ರಲ್ಲಿ ಮೊದಲು ನನ್ನ ಹೆಸರಿಗೆ 15 ಗುಂಟೆ ಇತ್ತು, ಈಗ ಬರೀ 13 ಗುಂಟೆ ಇದೆ. ಈಗ ಸರ್ವೆ ನಂ.9-3 ರಲ್ಲಿ ನನ್ನ ಹೆಸರಿಗೆ 6 ಗುಂಟೆ ಮತ್ತು 1 ನೇ ಪ್ರತಿವಾದಿ ಹೆಸರಿಗೆ 10 ಗುಂಟೆ ನಮೂದಾಗುತ್ತಿದೆ ಎಂದರೆ ನನ್ನ ಇನ್ನೂ 7 ಗುಂಟೆ ರಾಷ್ಟ್ರೀಯ ಹೆದ್ದಾರಿಗೆ ಸ್ವಾಧೀನವಾಗಿದೆ. ಯಾವ ಆಧಾರದ ಮೇಲೆ ನನಗೆ ಮತ್ತು 1 ನೇ ಪ್ರತಿವಾದಿಗೆ ಪ್ರತ್ಯೇಕವಾಗಿ ಪಹಣಿಗಳು ನಮೂದಗಿದ್ದವು ಎಂದರೆ ವಿಭಾಗ ಪತ್ರದ ಮೂಲಕ ನಮೂದಾಗಿದ್ದವು. ನನ್ನ ಬಳಿ ಆ ವಿಭಾಗ ಪತ್ರ ಇದೆ. ಆ ವಿಭಾಗ ಪತ್ರವನ್ನು ಕೋರ್ಟಿಗೆ ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ಸರಿ. ಸಾಕ್ಷಿಯು ವಿಭಾಗ ಪತ್ರವನ್ನು ಹಾಜರು ಮಾಡಿದ್ದೇನೆ ಎಂದು ಹೇಳಿದ್ದು, ಅವರು ಗುರುತಿಸಿಕೊಂಡ ದಾಖಲೆಗಳಲ್ಲಿ ವಿಭಾಗ ಪತ್ರ ಇರುವುದಿಲ್ಲ. ಸದರಿ ವಿಭಾಗ

ಪತ್ರದಂತೆ ನನಗೆ ಮತ್ತು ನನ ಅಣ್ಣನಿಗೆ ಎಲ್ಲಾ ಆಸ್ತಿಗಳಲ್ಲೂ ತಲಾ ಅರ್ಧ ಭಾಗ ಬಂದಿತ್ತು. ವಿಭಾಗವಾದ ನಂತರ ನಾನು ಮತ್ತು 1 ನೇ ಪ್ರತಿವಾದಿ ನಮ್ಮ ನಮ್ಮ ಪಾಲಿಗೆ ಬಂದ ಆಸ್ತಿಗಳಲ್ಲಿ ಸ್ವಾಧೀನ ಹೊಂದಿದ್ದೇವೆ ಎಂದರೆ ಸರಿ. ವಿಭಾಗವಾದ ನಂತರ ನನ್ನ ಅಣ್ಣ 1 ನೇ ಪ್ರತಿವಾದಿ ಆತನ ಹಿಸ್ಸೆಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಿದ್ದಾನೆ ಎಂದರೆ ಸಾಕ್ಷಿಯು ಮೋಸದಿಂದ ಮಾರಾಟ ಮಾಡಿದ್ದಾನೆ, ಆತನಿಗೆ ವಿಭಾಗದಲ್ಲಿ ಆಸ್ತಿ ಬಂದಿಲ್ಲ ಎನ್ನುತ್ತಾರೆ. ವಿಭಾಗ ಮಾಡಿಕೊಂಡ ನಂತರ ನನ್ನ ಅಣ್ಣ 1 ನೇ ಪ್ರತಿವಾದಿ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿ. ಈ ದಾವೆಯ ದಾವಾ ಸ್ವತ್ತು ವಿಭಾಗದಲ್ಲಿ ನನ್ನ ಅಣ್ಣನ ಹಿಸ್ಸೆಗೆ ಬಂದಿರುವ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತನ್ನು 1 ರಿಂದ 4 ನೇ ಪ್ರತಿವಾದಿಗಳು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸಂಗತಿ ನನಗೆ ಗೊತ್ತಿಲ್ಲ. ಸದರಿ ಕ್ರಯವನ್ನು ದಿ.03-07-2006 ರಂದು ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣನಿಗೆ ಐದು ಜನ ಮಕ್ಕಳು ಎಂದರೆ ಸರಿ. ವಿಭಾಗವಾದ ನಂತರ ಆತನ ಮಕ್ಕಳ ವಿದ್ಯಾಭಾಸ ಮತ್ತು ಪೋಷಣೆಯನ್ನು 1 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದ ಎಂದರೆ ಸರಿ. 1 ನೇ ಪ್ರತಿವಾದಿ ಸಾಲ ಮಾಡಿಕೊಂಡಿದ್ದ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ತನ್ನ ಸಾಲಗಳನ್ನು ತೀರಿಸಲು, ಬೇರೆ ಆಸ್ತಿ ಕೊಳ್ಳಲು ಮತ್ತು ಮಕ್ಕಳ ವಿದ್ಯಾಭಾಸಕ್ಕಾಗಿ 1 ನೇ ಪ್ರತಿವಾದಿ ಮತ್ತು ಅತನ ಮಕ್ಕಳು ದಾವಾ ಸ್ವತ್ತನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿ ಆಸ್ತಿ ಖರೀದಿಸಿದ ನಂತರ ಆತನೇ ಸ್ವಾಧೀನದಲ್ಲಿದ್ದ ಎಂದರೆ ಇಲ್ಲ, ನಾನು ಸ್ವಾಧೀನದಲ್ಲಿದ್ದೇನೆ. 7 ನೇ ಪ್ರತಿವಾದಿ ಆಸ್ತಿ ಖರೀದಿ ಮಾಡಿದ ನಂತರ ದಾವಾ ಸ್ವತ್ತಿನ

ಕಂದಾಯ ದಾಖಲೆಗಳು ಯಾರ ಹೆಸರಿಗೆ ಬರುತ್ತಿವೆ ಎಂದು ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿ ಖರೀದಿ ಮಾಡಿದ ನಂತರ 5 ಮತ್ತು 6 ನೇ ಪ್ರತಿವಾದಿಗಳು ಆತನ ವಿರುದ್ಧ ಒ.ಎಸ್.ನಂ.2256-2006 ರಂತೆ ಒಂದು ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯನ್ನು ಅವರು ವಿಭಾಗಕ್ಕಾಗಿ ಇದೇ ಕೋರ್ಟಿನಲ್ಲಿ ಸಲ್ಲಿಸಿದ್ದರು ಎಂದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ 5 ರಿಂದ 7 ನೇ ಪ್ರತಿವಾದಿಗಳ ನಡುವೆ ರಾಜೀಯಾಗಿ 5 ಮತ್ತು 6 ನೇ ಪ್ರತಿವಾದಿಗಳು ಕ್ರಯದ ದೃಢೀಕರಣ ಪತ್ರ ಬರೆದುಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ದಿ.11-07-2007 ರಂದು ಮತ್ತೆ 7 ನೇ ಪ್ರತಿವಾದಿ ಮತ್ತು ಆತನ ಕುಟುಂಬ ಸದಸ್ಯರಾದ 8 ಮತ್ತು 9 ನೇ ಪ್ರತಿವಾದಿಗಳು 10 ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ಆಧಾರದ ಮೇಲೆ 10 ನೇ ಪ್ರತಿವಾದಿ ಹೆಸರಿಗೆ ಖಾತೆ ಮತ್ತು ಪಹಣಿ ನಮೂದಾಗಿವೆ ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರವಾದ ದಿನಾಂಕದಿಂದ ಆಕೆ ಬದುಕಿರುವವರೆಗೆ 10 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದರು ಎಂದರೆ ನಾನೇ ಸ್ವಾಧೀನ ಹೊಂದಿದ್ದೆ. ಈಗ 10 ನೇ ಪ್ರತಿವಾದಿಯ ಮಗ ಸ್ವಾಧೀನದಲ್ಲಿದ್ದಾನೆ ಎಂದರೆ ಸರಿಯಲ್ಲ. ನಾನು 10 ನೇ ಪ್ರತಿವಾದಿ ಹೆಸರಿಗೆ ನಮೂದಾಗಿರುವ ಖಾತೆಯನ್ನು ಕಾನೂನುಬದ್ಧವಾಗಿ ಪ್ರಶ್ನಿಸಿರುವುದಿಲ್ಲ. ನನಗೆ ದಾವಾಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಅಧಿಕಾರ ಮತ್ತು ಸ್ವಾಧೀನ ಇಲ್ಲದಿದ್ದರಿಂದಲೇ ನಾನು ಆ ಖಾತೆ ಬದಲಾವಣೆಯನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಕ್ಕದ ದ್ಯಾವಪ್ಪನ ಜಮೀನನ್ನು ಕೂಡ 10 ನೇ

ಪ್ರತಿವಾದಿಯೇ ಖರೀದಿಸಿದ್ದು, ಈಗ ಆಕೆಯ ಮಗ ಸ್ವಾಧಿನದಲ್ಲಿದ್ದಾನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲಾ.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**